## ರಾಷ್ಟ್ರಧ್ವಜ ಮಾರಾಟದ ಅಂಕಿಅಂಶ

| ವರ್ಷ | ಮಾರಾಟ ಪ್ರಮಾಣ | ಮೌಲ್ಯ ( ಕೋಟಿಗಳಲ್ಲಿ) |
|---|---|---|
| 2020-21 | 16,290 | 1.15 |
| 2021-22 | 20,171 | 2.5 |
| 2022-23 | 28,850 | 4.28 |
| 2023-24 | 18,614 | 2.26 |
| 2024-25 | 12,922 | 1.8 |



ಅನ್ನಪೂರ್ಣ ದೊಡ್ಡಮನಿ



ಗರಗ ಕ್ಷೇತ್ರೀಯ ಸೇವಾ ಸಂಘದಲ್ಲಿ ಖಾದಿ ಬಟ್ಟೆ ಸಿದ್ಧತಾ ಕಾರ್ಯದಲ್ಲಿ ಸಿಬ್ಬಂದಿ

ಲಾಭ ಮತ್ತು ನಷ್ಟದ ವ್ಯವಹಾರಕ್ಕಿಂತ ದೇಶಸೇವೆ ಮತ್ತು ಖಾದಿ ಉದ್ಯಮ ಉಳಿಸಿಕೊಳ್ಳಬೇಕು ಎಂಬ ಗುರಿಯೊಂದಿಗೆ ಈ ಕಾಯಕದಲ್ಲಿ ನಿರತರಾಗಿದ್ದೇವೆ' ಎನ್ನುತ್ತಾರೆ ಸಂಘದ ಕಾರ್ಯದರ್ಶಿ ರಾಜೇಶ ಕಲಗಾರ.

### ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘ

ಧಾರವಾಡದಿಂದ 20 ಕಿ.ಮೀ. ದೂರದಲ್ಲಿರುವ ಮತ್ತು ಹುಬ್ಬಳ್ಳಿ ನಗರದ ಭಾಗವಾಗಿರುವ ಬೆಂಗೇರಿಯಲ್ಲಿ ಇರುವ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘದ ಪರಿಸ್ಥಿತಿ ಕೂಡ ಅಂಥ ಖುಷಿ ತರುವಂತಹದ್ದೇನಿಲ್ಲ. ಖಾದಿಯೇ ಜೀವಾಳ ಎಂದು ನಂಬಿರುವ ಈ ಗ್ರಾಮೋದ್ಯೋಗ ಕೇಂದ್ರವು ದೇಶದ ವಿವಿಧೆಡೆ ರಾಷ್ಟ್ರಧ್ವಜಗಳನ್ನು ವಿತರಿಸುತ್ತದೆ. ಆದರೆ, ಸದ್ಯಕ್ಕೆ ನಿರಾಸೆಭಾವ ಇದೆ.

ಕೇಂದ್ರದ ಸಿಬ್ಬಂದಿ ಮತ್ತು ಉದ್ಯೋಗಿಗಳು ಸೇರಿ ವಿವಿಧ ಅಳತೆಯನುಸಾರ ಟನ್‌ಗಟ್ಟಲೆ ರಾಷ್ಟ್ರಧ್ವಜಗಳನ್ನು ಸಿದ್ಧಪಡಿಸಿದ್ದಾರೆ. ಬಿಐಎಸ್ ಗುಣಮಟ್ಟವನ್ನೂ ಕಾಯ್ದುಕೊಂಡಿದ್ದಾರೆ. ಆದರೆ, ಯಾವುದೇ ರಾಜ್ಯದಿಂದ ಅಥವಾ ಸಂಘಸಂಸ್ಥೆಗಳಿಂದ ನಿರೀಕ್ಷಿತ ಪ್ರಮಾಣದಲ್ಲಿ ಬೇಡಿಕೆ ಇರದ ಕಾರಣ ಎಲ್ಲವೂ ಗೋದಾಮಿನಲ್ಲಿ ಶೇಖರಣೆ ಆಗಿವೆ.



'ಇಡೀ ದೇಶಕ್ಕೆ ರಾಷ್ಟ್ರಧ್ವಜಗಳನ್ನು ಪೂರೈಸುತ್ತೇವೆ ಎಂಬ ಹೆಮ್ಮೆ ನಮ್ಮದು. ಗುಣಮಟ್ಟದಲ್ಲಿ ರಾಜಿಯಿಲ್ಲ. ಬೇಡಿಕೆ ಬಂದಲ್ಲಿ ವಿಳಂಬ ಮಾಡುವುದಿಲ್ಲ. ಅದಕ್ಕಾಗಿ ವರ್ಷಪೂರ್ತಿ ರಾಷ್ಟ್ರಧ್ವಜ ಸಿದ್ಧಪಡಿಸುವುದೇ ಕಾಯಕ ನಮ್ಮದು. ಎಲ್ಲರೂ ಅದರಲ್ಲೇ ಪರಿಣತರಾಗಿದ್ದೇವೆ. ಪ್ರತಿ ವರ್ಷವೂ ಬೇಡಿಕೆ ಹೆಚ್ಚುತ್ತಿದ್ದ ಕಾರಣ ರಾಷ್ಟ್ರಧ್ವಜವನ್ನು ಅಚ್ಚುಕಟ್ಟಾಗಿ ಸಿದ್ಧಪಡಿಸಿ, ಬೇಡಿಕೆ ಅನುಸಾರ ವಿತರಿಸಲು ಖುಷಿಪಡುತ್ತಿದ್ದೆವು' ಎಂದು ಹೇಳುವಾಗ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘದ ವ್ಯವಸ್ಥಾಪಕಿ ಅನ್ನಪೂರ್ಣ ದೊಡ್ಡಮನಿ ಅವರ ಮೊಗದಲ್ಲಿ ಸಂಭ್ರಮವಿತ್ತು.

ಆದರೆ, ಅವರು ಮಾತುಗಳಲ್ಲಿ ಈ ಖುಷಿ ತುಂಬಾ ಹೊತ್ತು ಉಳಿಯಲಿಲ್ಲ. 'ಎರಡು ವರ್ಷಗಳಿಂದ ರಾಷ್ಟ್ರಧ್ವಜಕ್ಕೆ ಬೇಡಿಕೆಯೇ ಕುಸಿದಿದೆ. ಟನ್‌ಗಟ್ಟಲೆ ರಾಷ್ಟ್ರಧ್ವಜದ ಬಟ್ಟೆಗಳನ್ನು ಸಿದ್ಧಪಡಿಸುವುದರ ಜೊತೆಗೆ ರಾಷ್ಟ್ರಧ್ವಜಗಳನ್ನೂ ತಯಾರಿಸಿದ್ದೇವೆ. ಚೆನ್ನಾಗಿ ಪ್ಯಾಕ್ ಕೂಡ ಮಾಡಿದ್ದೇವೆ. ದೇಶ ಅಥವಾ ರಾಜ್ಯದ ಯಾವುದೇ ಆರ್ಡರ್ ಬರಲೆಂದು ಕಾಯುತ್ತಿದ್ದೇವೆ. ಆದರೆ ಯಾರಿಂದಲೂ ಕರೆ ಬರುತ್ತಿಲ್ಲ. ಇತಿಂಥ ಅಳತೆಯ ರಾಷ್ಟ್ರಧ್ವಜಗಳು ಇಲ್ಲಿ ಸಿಗುತ್ತವೆಯೇ ಎಂದು ವಿಚಾರಿಸಲು ಸಹ ಯಾರೂ ಬರುತ್ತಿಲ್ಲ' ಎಂದು ಹೇಳುವಾಗ ಅವರ ಮುಖದಲ್ಲಿ ನಿರಾಸೆಭಾವ ಆವರಿಸಿತು.

### ನಿರಾಸೆಯ ಕಾರ್ಮೋಡ

ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಗ್ರಾಮೋದ್ಯೋಗ ಕೇಂದ್ರದ ಸಿಬ್ಬಂದಿಗೆ ರಜೆಯೇ ಸಿಗುತ್ತಿರಲಿಲ್ಲ. ವಾರದ ರಜೆ ಪಡೆಯುವುದು ಕಷ್ಟವಾಗುತ್ತಿತ್ತು. ಬೆಳಿಗ್ಗೆ 10ಕ್ಕೆ ಬಂದರೆ, ಸಂಜೆ 6ರ ನಂತರವೂ ಕೆಲಸ ಮುಂದುವರೆಯುತ್ತಿತ್ತು. ಹಾಗಂತ ಅವರಿಗೆ ದುಡಿಮೆ ಬಗ್ಗೆ ಬೇಸರ ಇರುತ್ತಿರಲಿಲ್ಲ. ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಗೆ, ಸರಿಯಾಗಿ ಎಲ್ಲರಿಗೂ ರಾಷ್ಟ್ರಧ್ವಜ ತಲುಪಿದವು ಎಂಬುದು ಖಾತ್ರಿಯಾಗುವವರೆಗೆ ಅವರು ವಿರಮಿಸುತ್ತಿರಲಿಲ್ಲ.

ಆದರೆ, ಈಗ ಅಲ್ಲಿನ ಪರಿಸ್ಥಿತಿಯೇ ಬದಲಾಗಿದೆ. ಎರಡು ವರ್ಷಗಳಿಂದ ಹೊಲಿದಿರುವ ರಾಷ್ಟ್ರಧ್ವಜಗಳು ಅಲ್ಲಿಂದ ಸಾಗಣೆಯೇ ಆಗಿಲ್ಲ. ಉದ್ಯೋಗಿಗಳ ಸಂಖ್ಯೆ ಕುಸಿದಿದೆ. ರಾಷ್ಟ್ರಧ್ವಜಕ್ಕೆ ಬೇಡಿಕೆ ಕುಸಿದಿರುವ ಕಾರಣ ಅನಿವಾರ್ಯವಾಗಿ ಖಾದಿ ಚೀಲಗಳನ್ನು ಸಿದ್ಧಪಡಿಸುವಂತಹ ಪರಿಸ್ಥಿತಿ ತಲೆದೋರಿದೆ.

'ಪಾಲಿಯೆಸ್ಟರ್ ಸೇರಿದಂತೆ ಯಾವುದೇ ಬಟ್ಟೆಯ ರಾಷ್ಟ್ರಧ್ವಜವನ್ನು ಹಾರಿಸಬಹುದು ಎಂಬುದನ್ನೇ ನೆಪವಾಗಿಸಿಕೊಂಡು ಜನರು ಖಾದಿಯ ರಾಷ್ಟ್ರಧ್ವಜಗಳತ್ತ ಗಮನ ಹರಿಸುವುದೇ ಕೈಬಿಟ್ಟಿದ್ದಾರೆ. ನಾವು ಗುಣಮಟ್ಟ ಮತ್ತು ಬೆಲೆಗೆ ತಕ್ಕಂತೆ ರಾಷ್ಟ್ರಧ್ವಜ ನೀಡುತ್ತಿದ್ದರೂ ಅವುಗಳನ್ನು ಹಾರಿಸಲು ಜನರು ಆಸಕ್ತಿ ತೋರುತ್ತಿಲ್ಲ' ಎಂದು ಅನ್ನಪೂರ್ಣ ಹೇಳುತ್ತಾರೆ.

ಖಾದಿಯ ಬಗ್ಗೆ ಇದೇ ನಿರಾಸಕ್ತಿ ಧೋರಣೆ ಮುಂದುವರೆದರೆ, ಪರಿಸ್ಥಿತಿ ಇನ್ನಷ್ಟು ಹದಗೆಡಲಿದೆ ಎಂಬ ಆತಂಕ ಗ್ರಾಮೋದ್ಯೋಗ ಕಾರ್ಮಿಕರದ್ದು. ದೇಶಾಭಿಮಾನ ಮತ್ತು ದೇಶ ಸೇವೆ ಎಂಬ ನಂಬಿಕೆಯಲ್ಲಿ ಕನಿಷ್ಠ ಕೂಲಿಗೆ ದುಡಿಯುತ್ತಿರುವ ಸಂಘದ ಕಾರ್ಮಿಕರು ಬದುಕಿಗಾಗಿ ಅನಿವಾರ್ಯವಾಗಿ ಬೇರೆ ಮಾರ್ಗ ಕಂಡುಕೊಳ್ಳಬೇಕಾಗುತ್ತದೆ.

ಮಧ್ಯವಯಸ್ಕರು ಮತ್ತು ವೃದ್ಧರಷ್ಟೇ ಇರುವ ಖಾದಿ ಗ್ರಾಮೋದ್ಯೋಗ ಕೇಂದ್ರಗಳು ಮುಂದಿನ 5 ರಿಂದ 10 ವರ್ಷಗಳಲ್ಲಿ ಹಲವು ಬಗೆಯ ಸವಾಲು ಮತ್ತು ಸಂಕಷ್ಟಗಳನ್ನು ಎದುರಿಸಬೇಕಿದೆ. ■

## ಖಾದಿ ಉನ್ನತಿಗಾಗಿ...

- ಖಾದಿ ರಾಷ್ಟ್ರಧ್ವಜ ಬಳಕೆ ಕಡ್ಡಾಯ ಮಾಡುವುದು.
- ಖಾದಿ ಉದ್ಯಮಕ್ಕೆ ಸರ್ಕಾರದಿಂದ ಅನುದಾನ.
- ಖಾದಿ ಬಟ್ಟೆಗಳನ್ನು ತೊಡುವಂತೆ ಪ್ರೋತ್ಸಾಹ.
- ಖಾದಿ ಉದ್ಯಮದಲ್ಲಿ ತೊಡಗಿದವರಿಗೆ ವೇತನ ಹೆಚ್ಚಳ.
- ಗ್ರಾಮೋದ್ಯೋಗ ಸಂಘಗಳಿಗೆ ಹಣಕಾಸಿನ ನೆರವು.
- ಯುವಜನರಿಗೆ ಉದ್ಯೋಗಾವಕಾಶ ಪಡೆಯಲು ಆಸಕ್ತಿ.
- ಖಾದಿಗೆ ಬ್ರ್ಯಾಂಡಿಂಗ್ ಮಾದರಿಯಲ್ಲಿ ಮಾರುಕಟ್ಟೆ.
- ದೇಶಕ್ಕೆ ಖಾದಿಯೇ ರಾಯಭಾರಿಯಂತೆ ಪ್ರತಿಬಿಂಬಿಸುವುದು.